

# ಅಮಿತಾಭ್ ಎಂಬ ಅದ್ಭುತ ನಟ



ಮಗನ ಹೆಗಲ ಮೇಲೆ ಅಮಿತಾಭ್

ಒಬ್ಬ ಜನಪ್ರಿಯ ನಟ ಇಮೇಜ್‌ನ ಹಂಗು ತೊರೆದರೆ ಎಷ್ಟೊಂದು ವೈವಿಧ್ಯಮಯ ಪಾತ್ರಗಳನ್ನು ಮಾಡಬಹುದು.. ಎನ್ನುವುದನ್ನು ಅಮಿತಾಭ್ ಬಚ್ಚನ್‌ರನ್ನು ನೋಡಿ ಕಲಿಯಬೇಕು. ಇದೀಗ ತೆರೆಗೆ ಸಿದ್ದವಾಗಿರುವ ಅಮಿತಾಭ್ ಅಭಿನಯದ 'ಪಾ' ಚಿತ್ರದ ಪ್ರೊಮೋ ನೋಡಿದಾಗ 'ಈ ಅಮಿತಾಭ್ ನಿಜಕ್ಕೂ ಅಭಿನಯ ದೈತ್ಯ' ಎನ್ನುವ ಭಾವ ಎಲ್ಲರ ಮನಸ್ಸಿನಲ್ಲೂ ಮೂಡುತ್ತದೆ!

ಪಾ ಚಿತ್ರದಲ್ಲಿ ಅಮಿತಾಭ್ ನಿರ್ವಹಿಸಿದ್ದು 13 ವರ್ಷ ವಯಸ್ಸಿನ ಚಿಕ್ಕ ಹುಡುಗನ ಪಾತ್ರ! ಪ್ರೊಗೇರಿಯಾ ಎಂಬ ರೋಗಕ್ಕೆ ಒಳಗಾದ ಬಾಲಕನ ಹಾಗೂ ಆತನ ಅಪ್ಪನ ಭಾವುಕ ಸಂಬಂಧದ ಕುರಿತ ಕಥೆಯದು. ಪ್ರೊಗೇರಿಯಾ ಎಂದರೆ, ಅಕಾಲ ಮುಪ್ಪು ಆವರಿಸುವ ರೋಗ. ಎಷ್ಟೋ ಕೋಟಿ ಜನರಲ್ಲಿ ಒಬ್ಬಿಬ್ಬರಿಗೆ ಇರುವ ಈ ಅಪರೂಪದ ರೋಗ ಬಂದವರು ದೈಹಿಕವಾಗಿ 13 ವರ್ಷವಾಗಿದ್ದರೂ ವೃದ್ಧಾಪ್ಯ ಆವರಿಸಿಬಿಡುತ್ತದೆ.

ಸ್ವತಃ ಅಮಿತಾಭನ ಎಬಿ ಕಾರ್ಪ್ ಕಂಪೆನಿ ಈ ಚಿತ್ರವನ್ನು ನಿರ್ಮಿಸಿದೆ. 'ಚಿತ್ರಕ್ಕೆ ಖರ್ಚಾಗಿದ್ದು 15 ಕೋಟಿ ರೂಪಾಯಿ ಅಷ್ಟೆ' ಎಂದಿದ್ದಾರೆ ಅಮಿತಾಭ್.

ಮೇಕಪ್ ಮೂಲಕ 13 ವರ್ಷದ ಆರೊ ಎಂಬ ಹುಡುಗನ ಪಾತ್ರಕ್ಕೆ ಅದ್ಭುತ ಎನ್ನುವಂತೆ ದೇಹ ಭಾಷೆಯನ್ನು ಒಗ್ಗಿಸಿರುವ ಅಮಿತಾಭ್, ಸೆಟ್‌ನಲ್ಲೂ ಥೇಟ್ ಪುಟ್ಟ ಹುಡುಗನಂತೆ ಆಡುತ್ತಿದ್ದರಂತೆ! 'ಅಮಿತಾಭ್ ಎಂಬ ಮಹಾನ್ ವ್ಯಕ್ತಿತ್ವದ



ಪ್ರತಿಯೊಂದು ಕಣವನ್ನೂ ಕಳಚಿ ಇಡೀ ಪಾತ್ರ ಬೇರೆ ಯಾರೋ ಎನ್ನಿಸುವಂತೆ ರೂಪಿಸಲು ಶ್ರಮ ಪಟ್ಟಿದ್ದೇನೆ. ಆದರೆ ಚಿತ್ರಕಥೆಯನ್ನು ಬರೆಯುವಾಗಲೇ ನನ್ನ ದೃಷ್ಟಿಯಲ್ಲಿ ಅಮಿತಾಭ್‌ಗೇ ಈ ಪಾತ್ರ ಎನ್ನುವುದು ಖಚಿತವಾಗಿತ್ತು' ಎಂದಿದ್ದಾರೆ ಚಿತ್ರದ ನಿರ್ದೇಶಕ ಆರ್.ಬಾಲ್ಕಿ.

ಪ್ರತಿದಿನ ಶೂಟಿಂಗ್ ವೇಳೆ ಮೇಕಪ್ ಹಾಕಿಕೊಳ್ಳಲು 4 ಗಂಟೆ ಹಿಡಿಯುತ್ತಿತ್ತಂತೆ. ಮೇಕಪ್ ಕಳಚಲು ಎರಡು ಗಂಟೆ! ಅಮಿತಾಭ್ ಈ ಪಾತ್ರಕ್ಕೆ ಅದ್ಭುತವಾಗಿ ಜೀವ ತುಂಬಿದ್ದಾರೆ ಎನ್ನುತ್ತಾರೆ ಬಾಲ್ಕಿ.

ಅಂದ ಹಾಗೆ ಈ ಚಿತ್ರದಲ್ಲಿ ಅಮಿತಾಭ್ ತಂದೆಯ ಪಾತ್ರವನ್ನು ನಿರ್ವಹಿಸಿರುವುದು ಮಗ ಅಭಿಷೇಕ್ ಬಚ್ಚನ್. ಹೀರೋಯಿನ್ ಪಾತ್ರ ವಿದ್ಯಾ ಬಾಲನ್‌ಳದ್ದು. ಇಬ್ಬರೂ ಸೆಟ್‌ನಲ್ಲಿ ಅಮಿತಾಭ್ ನಟನೆ ನೋಡಿ ಮೂಕರಾಗಿದ್ದಾರಂತೆ!

# ಜಿಯಾ ಎಲ್ಲಿ?

ಗಜನಿ ಚಿತ್ರದಲ್ಲಿ ಎರಡನೆ ನಾಯಕಿಯಾದರೂ ಎಲ್ಲರ ಗಮನ ಸೆಳೆಯುವ ಪಾತ್ರವನ್ನು ಯಶಸ್ವಿಯಾಗಿ ನಿರ್ವಹಿಸಿ ಸುದ್ದಿ ಮಾಡಿದ ಜಿಯಾ ಖಾನ್ ಎಲ್ಲಿದ್ದಾಳೆ? ಬಲ್ಲವರ ಪ್ರಕಾರ, ಆಕೆ ಪ್ರೇಮದಲ್ಲಿ ಬಿದ್ದಿದ್ದಾಳಂತೆ! ನಿರ್ದೇಶಕ ಜಸ್‌ಪ್ರೀತ್ ಆಕೆಯ ಮನ ಗೆದ್ದ ಯುವಕನಂತೆ! ಇಬ್ಬರೂ ಕೂಡಿ ಮುಂಬೈಯಲ್ಲಿ ಸಖತ್ ಸುತ್ತುತ್ತಿದ್ದಾರಂತೆ!

ಜಿಯಾ ಖಾನ್ ನ್ಯೂಯಾರ್ಕಿನಲ್ಲಿ ಹುಟ್ಟಿ, ಇಂಗ್ಲೆಂಡಿನಲ್ಲಿ ಓದಿದವಳು. ಬಾಲಿವುಡ್‌ನಲ್ಲಿ ಅವಕಾಶ ಸಿಗಬೇಕೆಂದರೆ ಹೇಗಿರಬೇಕು ಎನ್ನುವುದು ಅಷ್ಟಾಗಿ ಗೊತ್ತಿಲ್ಲವಂತೆ. 'ಇಲ್ಲಿ ಕೇವಲ ನಟನಾ ಸಾಮರ್ಥ್ಯ ಇದ್ದರೆ ಸಾಲದು. ನಟನೆಗಿಂತ ನಿಮ್ಮ ಲಿಪ್‌ಸ್ಟಿಕ್‌ನ ಬಣ್ಣ ಹೇಗಿದೆ ಅನ್ನುವುದೇ ಮುಖ್ಯ' ಎಂದು ಜಿಯಾ ಬೇಸರ ವ್ಯಕ್ತಪಡಿಸಿದ್ದಾಳೆ!

–ಬಿಂದು



Printed and Published by S.V. Srinivasan on behalf of The Printers (Mysore) Private Ltd. Printed at Rajhans Enterprises, No.134, 4th Main Road, Industrial Town, Rajajinagar, Bangalore- 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bangalore - 560074.
Editor: K.N. TILAK KUMAR.
Editorial Office: 75, M.G Road, Bangalore-560 001 E-mail:editorsu@deccanherald.co.in. Phone: 2588 0000, Fax: 25880618, Editorial:25880619,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65